



# ಜೇನು ಜಗತ್ತಿಗೆ ಕಾಡುಮನೆ ಕನ್ನಡಿ




ಕಾಡುಮನೆ ಹನಿಪಾರ್ಕ್‌ನ ಸಂಸ್ಥಾಪಕ ನರಸಿಂಹ ಛಾಪಖಂಡ



ಮನುಕುಲದ ಉಳಿವಿನಲ್ಲಿ ಜೇನಿನ ಪಾತ್ರ ಮುಖ್ಯವಾದುದು. ಇಂಥ ಜೇನುಸಂಕುಲವನ್ನು ಉಳಿಸಿ ಬೆಳೆಸುವ ಉದ್ದೇಶದಿಂದ 2016ರಲ್ಲಿ ಸ್ಥಾಪಿಸಲಾದ ರಾಜ್ಯದ ಪ್ರಥಮ ಸರ್ಕಾರಿ ಅನುಮೋದಿತ ಹನಿಪಾರ್ಕ್ ಜೊಯಿಡಾದಲ್ಲಿದೆ. ಜೇನು ಕುರಿತು ಅಧ್ಯಯನ ಮಾಡುವವರಿಗೆ, ಪ್ರವಾಸಿಗರಿಗೆ ಮಾಹಿತಿ ನೀಡುವುದರ ಜೊತೆಗೆ ಪರಿಶುದ್ಧ ಜೇನು ಒದಗಿಸುವ ಕೆಲಸವನ್ನೂ ಈ ಕಾಡುಮನೆ ಹನಿಪಾರ್ಕ್ ಮಾಡುತ್ತಿದೆ.

■ ಕೃಷ್ಣಿ ಶಿರೂರ

'ಕಾಡುಮನೆ ಹನಿಪಾರ್ಕ್' ತಲುಪಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಹಗಲು ಹೊತ್ತಿನಲ್ಲೇ ಜೀರುಂಡೆಗಳ ಚೀರಾಟ ಜೋರಾಗಿ ಕೇಳುವ ಜೊಯಿಡಾದ ದಟ್ಟಕಾಡದು. ನಮ್ಮ ರಾಜ್ಯದಲ್ಲೇ ಅತೀ ಹೆಚ್ಚು ಅರಣ್ಯ ಪ್ರದೇಶ ಹೊಂದಿರುವ ತಾಲ್ಲೂಕು ಎಂಬ ಹೆಮ್ಮೆಯ ಅರಣ್ಯ ಕ್ಷೇತ್ರ. ಅದರಲ್ಲೂ ಮುಂಗಾರು ಮಳೆಯಿಂದ ಮಿಂದೆದ್ದು ಹಸುರು ಜಿನುಗುವ ಕಾಡ ನಡುವಿನ ದಾಂಡೇಲಿ–ಜೊಯಿಡಾದ ಕಪ್ಪು ಹಾದಿಯಲ್ಲಿ ನಮ್ಮ ವಾಹನ ಸಾಗುತ್ತಿದ್ದರೆ, ಎಡಭಾಗದಲ್ಲಿ 'ನಾಗೋಡಾ' ಎಂಬ ಫಲಕಕ್ಕೆ ಮೊದಲೊಂದು ಫಲಕ ಗೋಚರಿಸಿತು. ಅದುವೆ 'ಕಾಡುಮನೆ ಹನಿಪಾರ್ಕ್'.

## ದಟ್ಟಡವಿಯಲ್ಲಿ 'ಹನಿ ಪಾರ್ಕ್?'

ಅದುವರೆಗೂ ಕಾಡುಮನೆ ಎಂಬ ಪದವಷ್ಟೇ ಕೇಳಿದ್ದೆ. 'ಏನದು ಈ ಕಾಡುಮನೆ ಹನಿಪಾರ್ಕ್?' ಎಂದು ತಿಳಿಯುವ ಕುತೂಹಲ ಹೆಚ್ಚಿತು. ಇದೇ ಪಾಯಿಂಟ್‌ನಿಂದ ದಾಂಡೇಲಿಗೆ 20 ಕಿ.ಮೀ. ಆದರೆ ಜೊಯಿಡಾ ತಾಲ್ಲೂಕು ಕೇಂದ್ರಕ್ಕೆ ಕೇವಲ ಎರಡೇ ಕಿಲೋ ಮೀಟರ್ ಅಂತರ. ನಾಗೋಡಾ ಕ್ರಾಸ್‌ನಲ್ಲಿ ವಾಹನವನ್ನು ಬಲಕ್ಕೆ ಹೊರಳಿಸಿ, ಪಕ್ಕದಲ್ಲಿ ಹಾದುಹೋದ ರಸ್ತೆಯಲ್ಲಿ ಹೊರಟಾಯಿತು. 300 ಮೀಟರ್ ಸಾಗಿದಾಗ ಎಡಕ್ಕೆ 'ಹನಿಪಾರ್ಕ್‌ಗೆ ದಾರಿ' ಎಂಬ ಮಾರ್ಗಸೂಚಿ ಗೋಚರಿಸಿತು. ದಾರಿಯ ಆರಂಭದಲ್ಲೇ ಬೃಹದಾಕಾರದ ಗೋಣಿಮರ ಗಮನ ಸೆಳೆಯಿತು. ಆ ಮರ ದಾಟಿ ನಮ್ಮ ವಾಹನವನ್ನು ಪಾರ್ಕ್ ಮಾಡಿದ್ದಾಯಿತು.

ಕಾಡುಮನೆ ಹನಿಪಾರ್ಕ್‌ನ ಸಂಸ್ಥಾಪಕ ನರಸಿಂಹ ಛಾಪಖಂಡ ಅವರಿಂದ ಆತ್ಮೀಯ ಸ್ವಾಗತ ದೊರಕಿತು. ಹನಿಪಾರ್ಕ್‌ನ ಪರಿಕಲ್ಪನೆ ರಾಜ್ಯದಲ್ಲೇ ಪ್ರಥಮ ಎನ್ನುವುದನ್ನು ಹೇಳುತ್ತಲೇ ನರಸಿಂಹ ನಮ್ಮನ್ನು ಹನಿಪಾರ್ಕ್‌ನೊಳಗೆ ಕರೆದೊಯ್ದರು.

ಅಲ್ಲೇ ಬಲಪಕ್ಕದಲ್ಲಿ ಬಂದರೆ ನೋಂದಣಿ ಕೇಂದ್ರ. ಅದರ ಪಕ್ಕದಲ್ಲೇ ಜೋಡಿಸಿಟ್ಟ ಜೇನುತುಪ್ಪಗಳ ಸಾಲು ಸಾಲು ಬಾಟಲಿಗಳು. ಜೇನುತುಪ್ಪ ಹೀರಲೆಂದೇ ಏನೋ? ಒಂದು ಕಡಜಿರಿಗೆ ಹುಳ (ಜೇನು ಕುಟುಂಬದ ವಿಲನ್) ಗುಂಯ್‌ಗುಡುತ್ತ ಅಲ್ಲಿದ್ದ ಜೇನುತುಪ್ಪದ ಬಾಟಲಿಗಳನ್ನು ಸುತ್ತುಹಾಕುತ್ತಿತ್ತು. ಅದೇ ಶೆಲ್ಫ್‌ಗಳಲ್ಲಿ ವಿವಿಧ ಜಾತಿ, ವಿವಿಧ ಸೀಸನ್‌ಗಳಲ್ಲಿ ಸಿದ್ಧವಾಗುವ ವೈವಿಧ್ಯಮಯ ಜೇನುತುಪ್ಪಗಳ ವಿವಿಧ ಪ್ರಮಾಣದ ಬಾಟಲಿಗಳನ್ನು ಪೇರಿಸಿಡಲಾಗಿತ್ತು. ಜೇನುತುಪ್ಪದ ಬಾಟಲಿಗಳ ಜೊತೆಗೆ ಜೇನು ಮೇಣದಿಂದ (ಜೇನು ರಟ್ಟು) ಸಿದ್ಧಪಡಿಸಲಾದ ಬುದ್ಧನ ಮೂರ್ತಿ, ದೀಪಗಳೂ ಇದ್ದವು. ಜೇನುತುಪ್ಪದ ಆರೋಗ್ಯವರ್ಧಕ ಉತ್ಪನ್ನಗಳೂ ಇದ್ದವು.

ಅಷ್ಟೊತ್ತಿಗಾಗಲೇ ಏಳು ಮಂದಿಯಿದ್ದ